# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ M/s Fortune 5 Wind Energy (Karnataka) Private Limited ಕಂಪನಿಯವರಿಗೆ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕಾಲಾವಧಿ ವಿಸ್ತರಿಸಿ, ಸದರಿ ಸಾಮರ್ಥ್ಯದಲ್ಲಿ 3 ಮೆ.ವ್ಯಾ. ಸಾಮರ್ಥ್ಯವನ್ನು M/s Kotuma Wind Parks Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 100 ಮೆ.ವ್ಯಾ. ಹೆಚ್ಚಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಪತ್ರ ಸಂಖ್ಯೆ: ಇಎನ್ 81 ಎನ್‌ಸಿಇ 2015, ದಿನಾಂಕ:10.08.2015
2. ಸರ್ಕಾರದ ಆದೇಶ ಸಂಖ್ಯೆ:ಇಎನ್ 13 ಎನ್‌ಸಿಇ 2016, ದಿನಾಂಕ:18.01.2016
3. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರ ಪತ್ರ ಸಂಖ್ಯೆ: KREDL/08/KWPPL-100 MW (F5WEKPL-20MW)/Naregal/F-35 (2021)/2393, ದಿನಾಂಕ: 13.08.2021

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದನ್ವಯ M/s Fortune 5 Wind Energy (Karnataka) Private Limited ರವರಿಗೆ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನರೇಗಲ್, ಜಮ್ಮಾಪುರ್ ಮತ್ತು ಕುಚಲಾಪುರ್ ಗ್ರಾಮಗಳಲ್ಲಿ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ತಾತ್ವಿಕ ಅನುಮೋದನೆ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದನ್ವಯ M/s Fortune 5 Wind Energy (Karnataka) Private Limited ರವರಿಗೆ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನರೇಗಲ್, ಜಮ್ಮಾಪುರ್ ಮತ್ತು ಕುಚಲಾಪುರ್ ಗ್ರಾಮಗಳಲ್ಲಿ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮೇಲಿನ ಆದೇಶದನ್ವಯ M/s Fortune 5 Wind Energy (Karnataka) Private Limited ಕಂಪನಿಯವರಿಗೆ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ದಿನಾಂಕ:10.08.2021ರಿಂದ 09.08.2022ರವರೆಗೆ ಕಾಲಾವಧಿಯನ್ನು ವಿಸ್ತರಿಸುವಂತೆ ಹಾಗೂ 20 ಮೆ.ವ್ಯಾ ಸಾಮರ್ಥ್ಯದಲ್ಲಿ 3 ಮೆ.ವ್ಯಾ ಸಾಮರ್ಥ್ಯವನ್ನು M/s Kotuma Wind Parks Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 100 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಮತ್ತು ಮೂಲ ಆದೇಶದಲ್ಲಿನ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತಿಗೆ ಸಂಬಂಧಿಸಿದಂತೆ ನಮೂದಿಸಿರುವ PPA/ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ರಾಜ್ಯ ವಿದ್ಯುತ್ ಪ್ರಸರಣ ಜಾಲದ ಮುಖಾಂತರ ಮಾರಾಟ ಮಾಡುವ ಬದಲಾಗಿ, ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ವರ್ಗದ ಮುಖಾಂತರ ವಿದ್ಯುತ್ ಸರಬರಾಜು ಮಾಡಲು ಹಂಚಿಕೆ ಆದೇಶ ನೀಡುವಂತೆ ಕೋರಿ ವಿಸ್ತೃತ ಯೋಜನಾ ವರದಿ (DPR)ಯನ್ನು ಸಲ್ಲಿಸಿರುವುದಾಗಿ ಹಾಗೂ ಸದರಿ ವರ್ಗಾವಣೆಗೆ ಎರಡೂ ಕಂಪನಿಯವರು ಸಹಮತಿಯನ್ನು ನೀಡಿರುವುದಾಗಿ ಈ ಸಂಬಂಧ, M/s Fortune 5 Wind Energy (Karnataka) Private Limited ರವರು 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಕಾಲಾವಧಿ ವಿಸ್ತರಣಾ ಶುಲ್ಕ ಹಾಗೂ 3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ

ವರ್ಗಾವಣೆಗಾಗಿ ವರ್ಗಾವಣೆ ಶುಲ್ಕ, ಹಾಗೂ ಸಾಮರ್ಥ್ಯ ಹೆಚ್ಚಳದ ಅರ್ಜಿ ಮತ್ತು ಎಸ್.ಎಲ್.ಆರ್ ಶುಲ್ಕಗಳನ್ನು ಕೆ.ಆರ್.ಇ.ಡಿ.ಎಲ್. ಗೆ ಸಂದಾಯ ಮಾಡಿರುವುದಾಗಿ ಕ್ರೆಡಲ್ ರವರು ತಿಳಿಸಿರುತ್ತಾರೆ.

ಮುಂದುವರೆದು, M/s Kotuma Wind Parks Private Limited ಕಂಪನಿಯು ದಿನಾಂಕ:14.07.2021ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಹೈದರಾಬಾದ್‌ನಲ್ಲಿ ಸ್ಥಾಪಿತಗೊಂಡಿದೆ. ಸದರಿ ಕಂಪನಿಯು M/s Ecoren Energy India Private Limited ರವರಿಂದ ಸ್ಥಾಪಿಸಲ್ಪಟ್ಟ SPV ಕಂಪನಿಯಾಗಿರುತ್ತದೆ. M/s Ecoren Energy India Private Limited ರವರು ನಿಗದಿತ ನೆಟ್‌ವರ್ತ್ ಹೊಂದಿರುವುದಾಗಿ ಕ್ರೆಡಲ್ ರವರು ತಿಳಿಸಿರುತ್ತಾರೆ. M/s Kotuma Wind Parks Private Limited ರವರಿಗೆ ಯೋಜನೆಗೆ ಸಂಬಂಧಿಸಿದಂತೆ ಟೋಪೊಶೀಟ್ ಸಂಖ್ಯೆ:48M/14 ರಲ್ಲಿ ನೀಡಿರುವ ಅಕ್ಷಾಂಶ ಮತ್ತು ರೇಖಾಂಶಗಳ ಸ್ಥಳದಲ್ಲಿ ಸದರಿಯವರು 37 ವಿಂಡ್ ಟರ್ಬೈನ್‌ಗಳನ್ನು ಅಳವಡಿಸಲು ಪ್ರತಿ ಟರ್ಬೈನ್‌ಗೆ 4 ಎಕರೆಯಂತೆ ಒಟ್ಟು 148 ಎಕರೆ ಖಾಸಗಿ ಜಮೀನಿನಲ್ಲಿ ಅನುಷ್ಠಾನಗೊಳಿಸಬಹುದೆಂಬ ಅಭಿಪ್ರಾಯದೊಂದಿಗೆ ಸದರಿ ಯೋಜನೆಯ ಚೆಕ್‌ಲಿಸ್ಟ್‌ನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 191 ಎನ್‌ಸಿಇ 2021**
**ಬೆಂಗಳೂರು ದಿನಾಂಕ:19.01.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Fortune 5 Wind Energy (Karnataka) Private Limited ಕಂಪನಿಯವರಿಗೆ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ದಿನಾಂಕ:10.08.2021ರಿಂದ 09.08.2022ರವರೆಗೆ ಕಾಲಾವಧಿಯನ್ನು ವಿಸ್ತರಿಸಿ, ಸದರಿ ಸಾಮರ್ಥ್ಯದಲ್ಲಿ 3 ಮೆ.ವ್ಯಾ ಸಾಮರ್ಥ್ಯವನ್ನು M/s Kotuma Wind Parks Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 3 ಮೆ.ವ್ಯಾ ನಿಂದ 100 ಮೆ.ವ್ಯಾ ಸಾಮರ್ಥ್ಯಕ್ಕೆ, ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತುಗೊಳಪಟ್ಟು ಹೆಚ್ಚಿಸಿ ಆದೇಶಿಸಿದೆ.

**Geographical area description for 100 MW capacity wind power project of M/s Kotuma Wind Parks Private Limited**

| Sl. No. | Geographical area description of the project | Near by villages of the proposed area & District | Existing (Transfer) capacity in MW | Capacity enhancement in MW | Total capacity in MW |
|---|---|---|---|---|---|
| 1 | The identified area is covered by Private land. The road crossing towards Naregal to Gadag and Ron to Kot umachigi and area is covered in the following Geographical co-ordinates as:<br>Latitude:15°31'3.9" - 15°35'00''E<br>Longitude: 75°45'0"N - 75°50'0''E<br>Peaks: 630, 628, 646, 651, 646 & 645 m AMSL.<br>**Toposheet No:** 48 M/14 | Naregal, Jampur and Kuchalpur villages of Ron Taluk, Gadag District. | Out of allotted 20 MW, Only 3 MW | 97 MW | 100 MW (37 Nos x 2700 kW) |